ಇದ್ದಾರೆ ಅಂದುಕೊಂಡ ಈರಜ್ಜಿ, 'ಮದಿ ಅಂದ್ರೆ ಹಂಗೆ ಮಗಿ. ಗಂಡಾದವ್ನು ಕಚ್ಚಿದ್ರೂ ಚೀರೂಕೆಲ್ಲ, ಮುಟ್ಟಿದ್ರೂ ಮೀರುಕೆಲ್ಲ. ಮಕ್ಳುಮರಿ ಪಂಪಾರ ಅಂದ್ರೆ ಪುಮ್ಮೆ ಆತೀದು ಅಂದ್ಕಂಡ್ಯೆ? ಈಗ್ ಬಾಯ್ಮುಚ್ಕಂಡು ಪುಮ್ಮೆ ಇದ್ರೆ ಮುಂದ್ ಪಲೋ ಆತೀದ್ ಮಗಿ' ಎಂದು ಸಮಾಧಾನ ಮಾಡಿದಳು. ಆದ್ರೂ ಅವಳ ಎದೆಯೊಳಗೆ ಬೆಂಕಿ ಆರಿಸಲಾಗಲೇ ಇಲ್ಲ.

ಎಷ್ಟೇ ಎಳೆದುಕೊಂಡು ಹೋಗಿ ಬಿಟ್ಟರೂ ಮತ್ತೆ ಮತ್ತೆ ಓಡಿ ಬರುವ ಅವಳ ದಾಂಪತ್ಯ ವರ್ಷೋಪ್ಪೊತ್ತಿನಲ್ಲಿ ಮುಗಿದೇಹೋಯಿತು. ಅಂದಿನಿಂದ ಅವಳ ಮಾತೂ ನಿಂತೇ ಹೋಯಿತು.

'ಎಂತಾ ಪಾರಾಮಸಿ ಮಾಡ್ಕಂಡ್ಯೆ ನಾಗಿ. ಇನ್ ಎಟ್ ದಿನಾ ಅಂತ ಹೀಂಗೇ ಮನೆ ಒಳ್ಗೆ ಬಿದ್ದಿರ್ತೆ? ಆಗಂದು ಆಗೋಯ್ತು. ಎಲ್ಲ ಹೇಳ್ತಿರು, ಆ ವಡ್ಯಾ ವಡ್ತಿ ಚಲೋ ಈರು ಅಂತಿರು. ಬಾ ನನ್ ಪಂತೀಗೆ, ನಾನು ಕೆಲ್ಸ ಕೊಡಿಸ್ತಿ' ಎಂದು ಹೇಳಿದ ಈರಜ್ಜಿ (ಹಾಲ್ತೋಟದ) ಹೆಗಡೆಯವರ ಮನೆಯಲ್ಲಿ ಕೆಲಸ ಗೊತ್ತು ಮಾಡಿಕೊಟ್ಟಳು. ಆದರೆ ಹೀಗೆ ಎಡವಟ್ಟಾಗುತ್ತದೆ ಎಂದು ಈರಜ್ಜಿಗಾದರೂ ಏನು ಗೊತ್ತಿತ್ತು?

ಈರಜ್ಜಿಗೆ ಹೆಗ್ಡೇರು ಮಹಾ ಪಳಗಿದ ಹುಲಿ ಅಂತ ಗೊತ್ತಾಗಿದ್ದು ಆ ಹೊಡ್ಲಗದ್ದೆ ಮನೆ ನೀಲಕ್ಕನ ಜೊತೆ ಸಪ್ಪಿನ ಬೆಟ್ಟದಲ್ಲಿ ಮಗ್ಗಲಲ್ಲೆ ಮಲಗಿದ್ದು, ಅವಳ ಗಂಡನೇ ಕಣ್ಣಾರೇ ಕಂಡು ಹಾಂಡಾಹುಂಡಿ ಜಗಳ ಆಡಿದ್ದು, ರಾತ್ರಿ ಬೆಳಗಾಗುವುದರಲ್ಲಿ ಊರ ತುಂಬ ಗುಸು ಗುಸು ಸುದ್ದಿ ಹಬ್ಬಿದಾಗಲೆ. ಈಗಿತ್ತಲಾಗಿ ಹೆಗ್ಡೇರು ಕುಂಟಿಸುತ್ತಾ ನಡೆಯೋದು ನೀಲಕ್ಕನ ಗಂಡನ ಕೋಪದ ಪರಿಣಾಮ ಅಂತ ಜನ ತಮ್ಮತಮ್ಮಲ್ಲೆ ಆಡಿಕೊಳ್ಳುತ್ತಿದ್ದರೂ ಅವರ ತಲುಬು ಮಾತ್ರ ನಿಲ್ಲಲೇ ಇಲ್ಲ. ಈ ನಾಗಿಯನ್ನು ಏನು ವಶೀಕರಣ ಮಾಡಿದ್ರೊ ಏನೋ. ಒಂದು ಕೆಟ್ಟ ಗಳಿಗೆಯಲ್ಲಿ ನಾಗಿಯ ಮೇಲೂ ಅವರ ಸವಾರಿ ನಡೆದೇಹೋಯಿತು. ಮನಸ್ಸು ಬೇಡ ಅಂದರೂ ಅರಳುತ್ತಿರುವ ಹಾಳು ಮೈ ಕೇಳಬೇಕಲ್ಲ. ಅದರ ಗುರುತು ಮಾತ್ರ ಇವಳಲ್ಲಿ ಉಳಿಯಿತು.

ಈರಜ್ಜಿಗೆ ಮನಸ್ಸು ಕೇಳಲಿಲ್ಲ. ದೀಪದ ಬುಡ್ಡಿಗೆ ಕದರು ಹತ್ತಿದ್ದನ್ನು ಬೆರಳಲ್ಲೇ ಉದುರಿಸಿ ನಾಗಿ ಒಳಹೋದಳು. ಅಂಗಾತ ಮಲಗಿದ ನಾಗಿಗೆ 'ಆಗಿದ್ದೆಲ್ಲ ಆಗೋಯ್ತೆ. ಏನ್ ಮಾಡೂಕ್ ಆತೀದು? ಎಲ್ಲ ಮ್ಯಾನ್ ಕುಂತವ್ನ ಆಟ. ಪರೀಗೆ ಬೆಸ್ನೊಂದಾದ್ರೆ ಪಾಕು ಮಾರ್‍ತೈತಿ. ಬ್ಯಾನಿ ಶುರುವಾದ್ರೆ ಎಟ್ ಹೊತ್ನಾಗಾದ್ರೂ ಎಬ್ಸ ಮಗಿ. ನಿನ್ ಅವ್ವಿ ಅಂದೆ ತಿಳ್ಕ ಏನು?' ಎಂದು ಹೇಳಿ ಮನಸ್ಸಿನಲ್ಲೇ ದೇವರಿಗೆ ಕೈ ಮುಗಿಯುತ್ತ ಮನೆಗೆ ಬಂದು ಬುಡ್ಡಿ ಆರಿಸಿ ತಾನೂ ಮಲಗಿದಳು.

***

ಶ್ರಾವಣ ಮಾಸದ ಮಧ್ಯದ ಒಂದು ದಿನ ಈರಜ್ಜಿಯ ಮೊಮ್ಮಗ ಬಿಳಿಯ ಕಾಟನ್ ಸೀರೆಯ ಮೇಲೆ ಹಸಿರು ಕೇಸರಿ ಹೂಬಳ್ಳಿ ಇರುವ ತಾಯಿ ಹರಿದು ಬೇಡವಾಗಿ ಬಿಟ್ಟ ಸೀರೆಯ ಒಂದು ಆಯತಾಕಾರದ ತುಂಡನ್ನು ಹಿಡಿದುಕೊಂಡು ಹೊಲಿಯುತ್ತ ಕುಳಿತಿದ್ದನು. ಪಕ್ಕದಲ್ಲಿ ಒಂದು ಉದ್ದನೆಯ ಬಿದಿರು ಗಳ, ಸಾಮಾನು ಕಟ್ಟಿ ತಂದ ಗೋಣಿ ನೂಲು ಎಲ್ಲವೂ ಇತ್ತು. ತೆರಕಿನ ಕಲ್ಲಿ ಹೊಲಿಯುವದು ಗೊತ್ತಿರುವ ಅಜ್ಜಿಗೆ ಇದು ಏನು ಅಂತ ತಲೆಬುಡ ಅರ್ಥವಾಗಲಿಲ್ಲ.


ಕೆರೆಕೋಣ ಶಾಲೆಯಲ್ಲಿ ಐದನೇ ತರಗತಿಯಲ್ಲಿ ಓದುತ್ತಿರುವ ಮೊಮ್ಮಗ ಗೋಯ್ದು ಅಂದು ಬೆಳಗ್ಗೆ ತಾನೆ ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕಿದ್ದಕ್ಕಾಗಿ ಧ್ವಜ ಏರಿಸಿ ಝುಂಡಾ ಉಂಚಾ... ಹಾಡಿದ್ದು, ಭಾಷಣ ಮಾಡಿ ಚಪ್ಪಾಳೆ ತಟ್ಟಿದ್ದು, ಕೊಟ್ಟ ಒಂದೇ ಒಂದು ಪೆಪ್ಪರಮೆಂಟು ಕಿಸೆಯಲ್ಲಿ ಇಟ್ಟುಕೊಂಡು ಮನೆಗೆ ಬರುವಾಗ ದಾರಿಯಲ್ಲಿ ತಿನ್ನಲು ಹುಡುಕಾಡಿದರೆ ಚಡ್ಡಿ ವಟ್ಟೆಯಿಂದ ಜಾರಿ ಎಲ್ಲೋ ಬಿದ್ದು ಬಾಯಲ್ಲಿ ನೀರು ತರಿಸಿದ್ದು ಎಲ್ಲವನ್ನೂ ವಿಸ್ತಾರವಾಗಿ ನಡೆದದ್ದು ನಡೆದ ಹಾಗೆ ವಿವರಿಸಿದ. ಆದರೆ ತಾನೂ ಭಾಷಣ ಮಾಡಲು ಹೋಗಿ ಮಧ್ಯದಲ್ಲಿ ಮರೆತುಹೋಗಿ ಎಷ್ಟೇ ತಲೆಕೊಡವಿದರೂ ನೆನಪಾಗದೆ ಭಟ್ ಮಾಸ್ತರರು, 'ಹೋಗ ಹೋಗ ಪಡಹೊಡ್ದೆ ಸಾಕು' ಎಂದು ಹೇಳಿದಾಗ ಮಕ್ಕಳೆಲ್ಲ ಗೊಳ್ ಎಂದು ನಕ್ಕಿದ್ದನ್ನೂ, ನಕ್ಕವರಿಗೆ ತೆಗೆದು ಬಂದು ಬಾರಿಸಬೇಕೆನಿಸಿದರೂ ಏನೂ ಮಾಡಲಾಗದೆ ಕಣ್ಣಲ್ಲಿ ನೀರು ತುಂಬಿಕೊಂಡು ಜಾರುತ್ತಿರುವ ತನ್ನ ಚಡ್ಡಿಯನ್ನು ಮೇಲೇರಿಸಿಕೊಳ್ಳುತ್ತ ಬಂದು ತನ್ನ ಜಾಗದಲ್ಲಿ ಕುಳಿತಿದ್ದನ್ನು ಮಾತ್ರ ಹೇಳಲಿಲ್ಲ. ಮತ್ತು ಸರಿಯಾಗಿ ಭಾಷಣ ಮಾಡುವುದಕ್ಕಾಗಿಯೇ ಈ ಕೆಲಸ ಶುರು ಹಚ್ಚಿಕೊಂಡಿರುವುದನ್ನು ಮರೆಮಾಚಿದನು. ಬದಲಾಗಿ ತಾನೀಗ ಒಂದು ಬಾವುಟ ಮಾಡಿ ಹಾರಿಸುವುದಾಗಿಯೂ ಭಾಷಣ ಮಾಡಿ ಇಂದಿನ ಸ್ವಾತಂತ್ರ್ಯೋತ್ಸವದ ಮಜಾವನ್ನು ತೋರಿಸುವುದಾಗಿಯೂ ನೀನು ಗಣಪಯ್ಯ ಶೆಟ್ಟರ ಅಂಗಡಿಯಿಂದ ತನಗೆರಡು ಪೆಪ್ಪರಮೆಂಟನ್ನು ತಂದುಕೊಡಬೇಕೆಂದೂ ಹಟ ಹಿಡಿದ.

'ಕೆಲ್ಸ ಇಲ್ಲದ ಆಚಾರಿ ಮಗನ್ ಮುಕ್ಳಿ ಕೆತ್ತಿದ್ ಕಂಡ, ಅದೇನೊ ಗಾದೆ ಅಂತಿರಲ್ಲ ಹಾಂಗಾಯ್ತು ನಿಂದು. ಹಾರ್ಸು ಹಾರ್ಸು ನಿನ್ ತಾಕತ್ ಎಟ್ಟೇದು ಕಾಂಬಾ' ಎನ್ನುತ್ತ ಹೊಗೆಸಪ್ಪು ಖಾಲಿ ಆದದ್ದು ನೆನಪಾಗಿ ಶೆಟ್ಟರ ಅಂಗಡಿ ಕಡೆ ನಡೆದಳು ಈರಜ್ಜಿ.

ಶೆಟ್ಟರ ಹೆಂಡತಿ ಹತ್ತಿರ ತನ್ನ ಕಷ್ಟ ಸುಖ ಸಮಾಚಾರ ಮಾತನಾಡುತ್ತ ಹೊತ್ತು ಹೋಗಿದ್ದೇ ಗೊತ್ತಾಗದ ಈರಜ್ಜಿ ಬೇಗ ಬೇಗ ಮನೆಗೆ ಬಂದರೆ ಊಟಕ್ಕೆ ತಾಟಿಟ್ಟು ಮನೆಯವರು ಕಾಯುತ್ತಿದ್ದರು. ಈ ಹುಡುಗ ಮಾತ್ರ ಸುತಾರಾಂ ಬರಲು ತಯಾರಿರಲಿಲ್ಲ. ಅವನ 'ಝುಂಡಾ ಊಂಚಾ' ಕಾರ್ಯ ನಡೆದೇ ಇತ್ತು. ಅವರವ್ವ ಬಯ್ದು ನುಕ್ಕಿ ಬರ್ಲು ತೋರಿಸಿದ ಮೇಲೆ ಬಂದು ತುತ್ತು ನುಂಗಿದನೋ ಇಲ್ಲವೂ ಎನ್ನುವ ಹಾಗೆ ಮತ್ತೆ ಓಡಿ ಹೋಗಿ ತನ್ನ ಕಾರ್ಯದಲ್ಲಿ ತೊಡಗಿದ.

ಊಟ ಆಗಿ ಮಲಗುವಾಗ ಈರಜ್ಜಿಗೆ ಒಂದು ಕವಳ ಹಾಕಿ ಮಲಗುವ ರೂಢಿ. ಹೊಳ್ಳಿ ಅಂಚಿಗೆ ಹಸೆ ಹಾಕಿಕೊಂಡು ಕಾಲು ನೀಡಿ ಕುಳಿತು ಕವಳದ ಚಂಚಿಯಿಂದ ಅಡಿಕೆ ತೆಗೆದು ಕತ್ತಿಯಿಂದ ಕೆರೆಯತೊಡಗಿದಳು. ಮೊಮ್ಮಗನ ಧ್ವಜ ಸಾವಕಾಶವಾಗಿ ಏರುತ್ತಾ ಇತ್ತು. ಅಜ್ಜಿಗೆ ಏರಿಸಿಯೇ ತೋರಿಸುವ ಉಮೇದು ಅವನಿಗೆ. ಸಾವಕಾಶ ಎಲೆಯ ಸೆರೆ ತೆಗೆದು, ಸುಣ್ಣ ಹಚ್ಚಿ, ಹೊಗೆ ಸೊಪ್ಪಿನ ಚೂರನ್ನು ಉಗುರಲಿ ಚೂಟಿ ತೆಗೆದು, ಕೈಯಲ್ಲಿ ತಿಕ್ಕಿ ತಿಕ್ಕಿ, ಎಲೆ ಮೇಲಿಟ್ಟು ಮಡಚಿ ಇನ್ನೇನು ಬಾಯಿಗೆ ಹಾಕಿಕೊಳ್ಳಬೇಕು ಅನ್ನುವಾಗ ಪಕ್ಕದ ಗುಡಿಸಲಿಂದ 'ಅಯ್ಯೋ ಅವ್ವಿss ಸತ್ನಲ್ಲೆ ಅವ್ವಿsss... ' ಕಿಟಾರನೆ ಕಿರುಚಿದ ಧ್ವನಿ ಕೇಳಿತು. ಕವಳದ ಸುರುಳಿ ಕೆಳಗೆ ಬಿತ್ತು. ಒಮ್ಮೆಲೆ ದಿಗಿಲು ಬಡಿದ ಹಾಗೆ ಈರಜ್ಜಿ ದೀಪದ ಬುಡ್ಡಿ ಎತ್ತಿಕೊಂಡು ಎದ್ದೇನೋ ಬಿದ್ದೇನೋ ಎಂದು ಅಂಗಳ ಇಳಿದಳು. ಸಂಜೆಯಿಂದಲೂ ಮೋಡ ಕವಿದಿದ್ದ ಬಾನು ದಾಪುಗಾಲು ಹಾಕುವುದರಲ್ಲಿ ಗಾಳಿಯೊಂದಿಗೆ ಜಿಟಿಗುಡತೊಡಗಿತು. ಕೈ ಎಷ್ಟೇ ಅಡ್ಡ ಹಿಡಿದರೂ ಈರಜ್ಜಿಯ ಬುಡ್ಡಿ ದೀಪ ಆರಿಹೋಯ್ತು. ನಾಗಿಯ ಮನೆಯ ಮಗ್ಗುಲಲ್ಲಿದ್ದ ಮಾವಿನ ಮರದ ಟೊಂಗೆ ಬಸೋಲನೆ ಮುರಿದು ಬಿದ್ದ ಶಬ್ದ ಎದೆ ನಡುಗಿಸಿತು.

ಬೇಗ ದೀಪ ತಾರೆಂದು ಕೂಗುತ್ತ ಈರಜ್ಜಿ ತಿರುಗಿ ನೋಡಿದರೆ ಅಡರುಗತ್ತಿದ ಬುಡ್ಡಿಯ ಕ್ಷೀಣ ಬೆಳಕಲ್ಲಿ ಮೊಮ್ಮಗ ಏರಿಸಿದ ಬಾವುಟ ಗಾಳಿಗೆ ಜೋರಾಗಿ ಬುಡಕಿತ್ತು ಬೀಳುವ ಹಾಗೆ ಹೊಡೆದುಕೊಳ್ಳುತ್ತಿತ್ತು.



ಪ್ರತಿಕ್ರಿಯಿಸಿ: feedback@sudha.co.in